# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

77

| ವಾದಿಗಳು: | ಪ್ರತಿವಾದಿಗಳು: |
| --- | --- |
| ಶ್ರೀ ಕಜ್ಜೆ ಗೋವಿಂದ ತಂದೆ ದಿ॥ ಕಜ್ಜೆ ಹನುಮಂತಪ್ಪ | ಕಂದಾಯ ನಿರೀಕ್ಷಕರು ರೂಪನಗುಡಿ |

ವಿಷಯ:-ಬಳ್ಳಾರಿ ತಾಲೂಕು ರೂಪನಗುಡಿ ಹೋಬಳಿ ಚಂಡೂರು ಗ್ರಾಮದ ಸರ್ವೆ ನಂ:49/ಎ ವಿಸ್ತೀರ್ಣ:2.00 ಎಕರೆ ಜಮೀನಿಗೆ ಸಂಬಂಧಿಸಿಂದತೆ ವಿಚಾರಣೆ ಕುರಿತು.

******

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ರೂಪನಗುಡಿ ಹೋಬಳಿ ಚಂಡೂರು ಗ್ರಾಮದ ಸರ್ವೆ ನಂ:49/ಎ ವಿಸ್ತೀರ್ಣ:2.00 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀ ಕಜ್ಜೆ ಹನುಮಂತಪ್ಪ ತಂದೆ ಹೊನ್ನೂರಪ್ಪ ಇವರು ದಿನಾಂಕ:27-01-2010 ರಂದು ಮೃತಪಟ್ಟಿರುತ್ತಾರೆ ಇವರ ಪತ್ನಿಯು ಸಾಹ ಮೃತಪಟ್ಟಿರುತ್ತಾರೆ ಕಾರಣ ಪೌತಿ ವಾರಸುದಾರರು ಪೌತಿ ಹಕ್ಕು ಬದಲಾವಣೆಗೆ ಮನವಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು, ರೂಪನಗುಡಿ ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಆದರೆ ಅರ್ಜಿದಾರರು ವಂಶವೃಕ್ಷದಲ್ಲಿ ಇನ್ನೂ ವಾರಸುದಾರರ ಹೆಸರು ನಮೂದಿಸಿರುವುದಿಲ್ಲ ಕಾರಣ ಸದ್ರಿ ಪೌತಿ ಹಕ್ಕು ಬದಲಾವಣೆ ಕಡತವನ್ನು ತಿರಸ್ಕರಿಸಿ ವಿಚಾರಣೆನಡೆಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:04-04-2016, ಮತ್ತು 16-05-2016 ರಂದು ವಿವಾರಣೆ ನಡೆಸಲಾಗಿ ಅರ್ಜಿದಾರರು ಪ್ರಕರಣಕ್ಕೆ ಹಾಜರಾಗಿ ವಂಶವೃಕ್ಷವನ್ನು ಸಲ್ಲಿಸಿರುತ್ತಾರೆ. ಪೌತಿ ವಾರಸುದಾರರ ಶ್ರೀಮತಿ ಮಲ್ಲಮ್ಮ ಆಲಿಯಾಸ್ ವಂಡ್ರಮ್ಮ, ಬಜಾರಮ್ಮ ಅಲಿಯಾಸ್ ವಂಡ್ರಮ್ಮ ಪ್ರಕರಣಕ್ಕೆ ಹಾಜರಾಗಿ ಶ್ರೀ ಕಜ್ಜೆ ಗೋವಿಂದ ತಂದೆ ದಿ॥ ಕಜ್ಜೆ ಹನುಮಂತಪ್ಪ ಇವರ ಹೆಸರಿಗೆ ಪೌತಿ ಹಕ್ಕು ಬದಲಾವಣೆ ಮಾಡಲು ಒಪ್ಪಿಗೆ ಸೂಚಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ.

-::ಆದೇಶ::-

ಸಂ/ಕಂ/ವಿವಾದ/98/2015-16 ದಿನಾಂಕ:21/6/2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ರೂಪನಗುಡಿ ಹೋಬಳಿ ಚಂಡೂರು ಗ್ರಾಮದ ಸರ್ವೆ ನಂ:49/ಎ ವಿಸ್ತೀರ್ಣ:2.00 ಎಕರೆ ಜಮೀನನ್ನು ಶ್ರೀ ಕಜ್ಜೆ ಗೋವಿಂದ ತಂದೆ ದಿ॥ ಕಜ್ಜೆ ಹನುಮಂತಪ್ಪ ಇವರ ಹೆಸರಿಗೆ ಪೌತಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ:21.6.16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

21/6/16

ತಹಶೀಲ್ದಾರರು
ಬಳ್ಳಾರಿ.

ತಹಶೀಲ್ದಾರರು, ಬಳ್ಳಾರಿ
Tasildar, Bellary

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ